ಇಟ್ಟರೆ ಒಂದು ದಿನ ನನಗೆ ಗೊತ್ತಿಲ್ಲದಂತೆ ರದ್ದೀವಾಲನ ಸೈಕಲ್ಲೇರಿ ಬಿಡುತ್ತವೆ. ಇಷ್ಟವಾದರೆ ನೀನೂ ತೆಗೆದುಕೊಂಡು ಓದು' ಎಂದಿದ್ದರು. ದೀಪಕನ ಹತ್ತಿರ ಬೀರುವಿನಲ್ಲಿಡುವಷ್ಟು ಪುಸ್ತಕಗಳಾದರೂ ಎಲ್ಲಿದ್ದವು. ಅವನು ಒಮ್ಮೆ ಕುತೂಹಲದಿಂದ ಬೀರು ತೆಗೆದು ನೋಡಿದ. ಅದರಲ್ಲಿ 'ಚಂದ್ರಕಾಂತಾ ಸಂತತಿ'ಯ ಅನೇಕ ಭಾಗಗಳು, ಪ್ರೇಮಚಂದರ 'ಮಾನಸ ಸರೋವರ' ಚತುರ್ಸೇನ ಶಾಸ್ತ್ರಿಯವರ ಕೆಲವು ಪುಸ್ತಕಗಳು, ಇನ್ನೂ ಅನೇಕ ಪ್ರಸಿದ್ಧ ಲೇಖಕರ ಕೃತಿಗಳಿದ್ದವು. ಪಠ್ಯ ಪುಸ್ತಕಗಳನ್ನಲ್ಲದೇ ಬೇರೆ ಪುಸ್ತಕಗಳನ್ನು ಓದುವ ಹವ್ಯಾಸ ದೀಪಕನಿಗಿರಲಿಲ್ಲ. ಅವಕಾಶವೂ ಇರಲಿಲ್ಲ. ಆ ಬೀರುವಿನ ಆಕರ್ಷಣೆ ಅವತ್ತಿಗೇ ಮುಗಿದು ಹೋಗಿತ್ತು. ಆದರೆ ಇವತ್ತು ಬೇರೆ ರೂಪದಲ್ಲಿ ಎದುರಿಗೆ ಬಂದಿದೆ.

'ನಿನಗೆ ಅವಶ್ಯತೆ ಇರುವಾಗ ಇದರಲ್ಲಿರುವ ದುಡ್ಡನ್ನು ತೆಗೆದುಕೊಂಡು ಅನುಕೂಲವಾದಾಗ ಇಟ್ಟುಬಿಡು' ಎಂದು ಚಿಕ್ಕಪ್ಪನೇನೋ ಹೇಳಿದ್ದರು. ದುಡ್ಡಿನ ಆವಶ್ಯಕತೆ ಯಾವಾಗ ಇರುವುದಿಲ್ಲ– ಇದೇ ತಿಂಗಳೇ ಆಯಿತಲ್ಲ– ಅವನು ಯೋಚಿಸಿಯೇ ಎಲ್ಲರಿಗೂ ಹತ್ತನೇ ತಾರೀಖಿಗೆ ಕೊಡುವುದಾಗಿ ಹೇಳಿದ್ದ. ಅನಂತರ ನಾಲ್ಕು ದಿನಗಳಾದರೂ ಊರಿನಿಂದ ದುಡ್ಡು ಬಾರದಿದ್ದಾಗ ಎಲ್ಲರೂ ಏನೆಂದುಕೊಳ್ಳುವರೋ, ಎಲ್ಲರೆದುರಿಗೆ ಮರ್ಯಾದೆ ಹೋಗುವಂತಾಗಬಾರದೆಂದು ಅವನು ಹೋಟೆಲಿಗೆ ಊಟಕ್ಕೂ ಹೋಗದೇ ನಾಲ್ಕು ದಿನಗಳ ಅನಂತರ ದುಡ್ಡು ತೆಗೆದುಕೊಂಡು ಹೋದಾಗ ಹೋಟೆಲ್ ಮಾಲೀಕ 'ಎರಡು ದಿನ ಎಲ್ಲಿಗೆ ಹೋಗಿದ್ದಿರಿ?' ಎಂದು ಕೇಳಿದ. ದೀಪಕನ ಮುಖ ನೋಡಿಯೇ ಅವನ ಅನುಭವೀ ದೃಷ್ಟಿಗೆ ಯಾಕೆಂದು ಗೊತ್ತಾಗಿ ಹೋಯಿತು. 'ಬಾಬೂ, ಒಮ್ಮೊಮ್ಮೆ ದುಡ್ಡು ಬರುವುದು ತಡವಾಗುತ್ತದೆ. ಹಾಗಂತ ಊಟಕ್ಕೆ ಬರಬಾರದೇ, ನೀವು ನನ್ನ ಕಾಯಂ ಗಿರಾಕಿ; ನಾನೇನೂ ನಿಮ್ಮನ್ನು ದುಡ್ಡಿಗಾಗಿ ಬಲವಂತ ಮಾಡುವುದಿಲ್ಲ' ಅಲ್ಲಿದ್ದ ಗಿರಾಕಿಗಳ ಮುಂದೆಯೇ ಅವನು ಹಾಗೆ ಹೇಳಿದ್ದಕ್ಕೆ ದೀಪಕನಿಗೆ ನಾಚಿಕೆಯಾಯಿತು. ಅಲ್ಲಿದ್ದವರಲ್ಲಿಯೇ ಯಾರೋ ಚಿಕ್ಕಪ್ಪನಿಗೆ ವಿಷಯ ತಿಳಿಸಿರಬಹುದೆಂದುಕೊಂಡ. ಆ ರಾತ್ರಿ ದೀಪಕನಿಗೆ ನಿದ್ದೆ ಬರಲಿಲ್ಲ. ಆ ಮೇಲೆ ಕೂಡ ಹಾಸಿಗೆಯ ಮೇಲೆ ಮಲಗುತ್ತಲೇ ಬೀರುವಿನ ಕಡೆಗೇ ಮನಸ್ಸು ಹೋಗುತ್ತಿತ್ತು. ತನಗಿರುವ ದುಡ್ಡಿನ ಆವಶ್ಯಕತೆಯ ಬಗ್ಗೆಯೇ ಯೋಚಿಸುತ್ತಿದ್ದ. ಅವನ ಕೋಣೆಯಲ್ಲಿ ಒಂದು ಟೇಬಲ್ಲೇನೋ ಇತ್ತು ಆದರೆ ಒಂದು ಟೇಬಲ್‌ಲ್ಯಾಂಪಿನ ಆವಶ್ಯಕತೆ ಇತ್ತು. ಅಣ್ಣನ ಮದುವೆಯಲ್ಲಿ ನಾಲ್ಕೈದು ಟೇಬಲ್ ಲ್ಯಾಂಪುಗಳು ಉಡುಗೊರೆಯಾಗಿ ಬಂದಿದ್ದವು. ಅವುಗಳನ್ನು ಅತ್ತಿಗೆ ತಮ್ಮ ಅಣ್ಣ ತಮ್ಮಂದಿರ ಮಕ್ಕಳಿಗೆ ಕೊಟ್ಟು ಬಿಟ್ಟರು. ತಮ್ಮ ಮನೆಯಲ್ಲಿಯೂ ಓದುವ ಒಬ್ಬ ಮೈದುನನಿರುವನೆಂದು ಅವರಿಗೆ ನೆನಪೇ ಆಗಲಿಲ್ಲವೋ ಏನೋ– ಇಲ್ಲಿಗೆ ಬರುವಾಗ ನಾಲ್ಕು ಜೊತೆ ಬಟ್ಟೆ ಹೊಲಿಸಿಕೊಂಡಿದ್ದ, ಅವೇನೋ ಚೆನ್ನಾಗಿಯೇ ಇವೆ. ಆದರೆ ಒಂದು ಸ್ವೆಟರ್ ಬೇಕಾಗಿತ್ತು. ರಕ್ಷಾಬಂಧನಕ್ಕಾಗಿ ಅಕ್ಕ ಬಂದಾಗ ಅವಳನ್ನು ಕೇಳೋಣ ಎಂದುಕೊಂಡ. ಅವಳಾಗಲೇ ಅವನಿಗಾಗಿ ಪ್ಯಾಂಟ್–ಶರ್ಟಿನ ಬಟ್ಟೆ ತಂದಾಗಿತ್ತು. ಮತ್ತೆ ಸ್ವೆಟರ್ ಕೇಳಲು ಸಂಕೋಚವಾಯಿತು. ಅವಳು ತಂದ ಬಟ್ಟೆಗಳನ್ನು ಟೇಲರ್‌ಗೆ ಕೊಟ್ಟು ರಸೀದಿಯನ್ನು ಅಮ್ಮನ ಕೈಗೆ ಕೊಟ್ಟು ಬಂದಿದ್ದ. ಹೊಲಿಗೆಗೆ ಕೊಡಲು ದುಡ್ಡಿಲ್ಲವೆಂದು ಅಮ್ಮ ಮರುದಿನವೇ ಬಟ್ಟೆಯನ್ನು ವಾಪಸ್ ತೆಗೆದುಕೊಂಡು ಬಂದಿರುವರೆಂದು ಗೊತ್ತಾಯಿತು. ಅತ್ತಿಗೆಯನ್ನು ಕೇಳಬಹುದಿತ್ತು. ಅಕ್ಕ ಅವನಿಗೆ ಬಟ್ಟೆ ತಂದು ತಮ್ಮ ಮಕ್ಕಳಿಗೆ ಬರೀ ಸ್ವೀಟು, ಆಟದ ಸಾಮಾನುಗಳನ್ನಷ್ಟೇ ತಂದಿರುವಳೆಂದು ಅವರು ಮೊದಲೇ ಕೋಪದಲ್ಲಿದ್ದರು. ಅಕ್ಕ ಕೊಟ್ಟ ಬಟ್ಟೆಗಳು ಇನ್ನೂ ಹಾಗೆ ಪೆಟ್ಟಿಗೆಯಲ್ಲಿ ಬಿದ್ದಿವೆ– ಚಪ್ಪಲಿ ಕೂಡ ಕಿತ್ತು ಹೋಗುತ್ತಿದೆ. ಜೀವನದಲ್ಲಿ ಎಷ್ಟೊಂದು ಸಣ್ಣ, ಪುಟ್ಟ ಆಸೆಗಳಿರುತ್ತವೆ. ಕೈಗೆಟಕುವ ದೂರದಲ್ಲೇ ಸಾವಿರಾರು ರೂಪಾಯಿಗಳಿವೆ. 'ಆವಶ್ಯಕತೆ ಇದ್ದಾಗ ತೆಗೆದುಕೊ, ಅನುಕೂಲವಾದಾಗ ಮತ್ತೆ ಇಟ್ಟುಬಿಡು' ಎಂದು ಅವರೇನೋ ಹೇಳಿದ್ದಾರೆ– ಹಾಗಂತ ತೆಗೆದುಕೊಳ್ಳಲು ಸಾಧ್ಯವೇ. 'ದೀಪೂ ನೀನು ತಂದೆ ಇಲ್ಲದ ಪರದೇಶಿ,